ಕರ್ನಾಟಕವಿಧಾನಸಭೆ

ಪ್ರಶ್ನೆಸಂಖ್ಯೆ	ಎಲ್.ಎ.ಕ್ಯೂ .1789
ಸದಸ್ಯರಹೆಸರು	ಸುರೇಶ್ ಬಾಬು ಸಿ .ಬಿ (ಚಿಕ್ಕನಾಯಕನಹಳ್ಳಿ)
ಉತ್ತರಿಸಬೇಕಾದದಿನಾಂಕ	24/07/2024
ಉತ್ತರಿಸುವಸಚಿವರು	ಮಾನ್ಯ ಕೃಷಿ ಸಚಿವರು .

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 2-3 ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ಯಂತ್ರಗಳನ್ನು ನೀಡದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ; ಕೃಷಿ ಯಾಂತ್ರೀಕರಣ ಯೋಜನೆಯಡಿ ಯಂತ್ರಗಳನ್ನು ನೀಡದಿರಲು ಕಾರಣಗಳೇನು;	ಕಳೆದ 2-3 ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ಯಂತ್ರಗಳನ್ನು ನೀಡದಿರುವುದು ಸರ್ಕಾರ ಗಮನಕ್ಕೆ ಬಂದಿರುವುದಿಲ್ಲ . ಕೃಷಿ ಇಲಾಖೆಯಲ್ಲಿ ಪ್ರತಿ ವರ್ಷವೂ ಲಭ್ಯವಿರುವ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸಲಾಗುತ್ತಿದೆ . 2021-22, 2022-23 ಮತ್ತು 2023-24 ನೇ ಸಾಲುಗಳಲ್ಲಿ ಕೃಷಿ ಯಾಂತ್ರೀಕರಣ ಯೋಜನೆಗಳಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ನೀಡಿದ ವಿವರಗಳನ್ನು ಈ ಕೆಳಗೆ ನೀಡಿದೆ .

ಕ್ರ.ಸಂ	ವರ್ಷ	ಫಲಾನುಭವಿಗಳು / ಭೌತಿಕ (ಸಂಖ್ಯೆಗಳಲ್ಲಿ)	
		ಪ.ಜಾ.ಉ (422)	ಗಿ .ಜ.ಉ (423)
1	2021-22	24232	13164
2	2022-23	12280	9118
3	2023-24	24010	8684

ಆ)	ಸದರಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಫಲಾನುಭವಿಗಳಿಗೆ ಯಂತ್ರಗಳನ್ನು ಯಾವಾಗ ವಿತರಿಸಲಾಗುವುದು ?	ಕೃಷಿ ಯಾಂತ್ರೀಕರಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಯಂತ್ರೋಪಕರಣಗಳ ವಿತರಣೆಯು ಚಾಲ್ತಿಯಲ್ಲಿರುತ್ತದೆ .

ಕೃಷಿ ನಿರ್ದೇಶಕರು

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ: ಉಕೃನಿ(ಕೃಯಾಂ&ಸೂನೀ)/LAQ 1789/2024-25

ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ,
ಬೆಂಗಳೂರು-01,
ದಿನಾಂಕ: 16.07.2024

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೆ,

ವಿಷಯ: ಸುರೇಶ್ ಬಾಬು ಸಿ .ಬಿ, (ಚಿಕ್ಕನಾಯಕನಹಳ್ಳಿ), ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ರಹಿತ
ಪ್ರಶ್ನೆ ಸಂಖ್ಯೆ 1789 ಕ್ಕೆ ಉತ್ತರಿಸುವ ಕುರಿತು
*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸುರೇಶ್ ಬಾಬು ಸಿ.ಬಿ, (ಚಿಕ್ಕನಾಯಕನಹಳ್ಳಿ), ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1789 ಕ್ಕೆ ಕೇಳಿರುವ ಮಾಹಿತಿಯನ್ನು ಸಿದ್ದಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ಕೃಷಿ
ನಿರ್ದೇಶಕರು